

ಸುಮಿತ್ರೆಯನ್ನು ಮನೆಗೆ ಕರೆದುಕೊಂಡು ಹೋದದ್ದು ಎಡವಟ್ಟಾಯಿತು ಎಂಬುದು ತಿಳಿಯಲು ಫಿಲಿಪ್ ಕಾರ್ಡೆರೋಗೆ ಹೆಚ್ಚು ಹೊತ್ತು ಹಿಡಿಯಲಿಲ್ಲ. ಆ ಮಧ್ಯಾಹ್ನ, ಸೋಫಾದ ಎಡ ಮೂಲೆಯಲ್ಲಿ ಕುಳಿತು, ಬಲ ಮೂಲೆ ತುದಿಯಲ್ಲಿ ಮುದುರಿ ಕುಳಿತಿದ್ದ ಸುಮಿಯೆಡೆಗೆ ಕುತ್ತಿಗೆಯನ್ನಷ್ಟೇ ತಿರುಗಿಸಿ, 'ಯಾವ ಊರು?', 'ತಂದೆಗೆಂತ ಕೆಲಸ?', 'ಇವ ಹೇಗೆ ಗೊತ್ತು?', ಮೊದಲಾದ ಪ್ರಶ್ನೆಗಳನ್ನು ಒಂದಾದರೊಂದಂತೆ ಎಸೆಯುತ್ತಿದ್ದ ಮಮ್ಮಿಯ ಮುಖದಲ್ಲಿದ್ದ ಭಯಂಕರ ಅಸಡ್ಡೆ ಕಂಡಿದ್ದೇ ಕೆಲಸ ಕೆಟ್ಟಿದ್ದು ತಿಳಿಯಿತು. ಮಮ್ಮಿಯನ್ನು ನೋಡಲೂ ಧೈರ್ಯವಿಲ್ಲದೇ ಬೆಕ್ಕಿನ ಪಕ್ಕದಲ್ಲಿ ಬೆದರಿ ಕುಳಿತ ಇಲಿ ಮರಿಯಂತೆ ಕಾಣುತ್ತಿದ್ದ ಸುಮಿ, ಇವನು 'ಹೊರಡುವಾ?' ಎಂದದ್ದೇ, ಬದುಕುಳಿದರೆ ಬೇಡಿಕೊಂಡು ತಿಂದೇನು ಎಂಬಂತೆ ಧಬ್ಬಲ್ಲನೆ ಎದ್ದಳು. ಅಲ್ಲೇ ಗೋಡೆಗೊರಗಿ ನಿಂತು, ಎಲ್ಲವನ್ನೂ ನೋಡುತ್ತಿದ್ದ ಇವನ ತಂಗಿ ಎಡ್ವಿನಾ ಕಿಸಕ್ಕನೇ ನಕ್ಕಳು. ಸುಮೀ ಹೊರಡುವಾಗ, 'ಆಂಟೀ, ಹಲಸಿನ ಕಾಯಿ ಪಲ್ಯ ತುಂಬ ಚೆನ್ನಾಗಿತ್ತು' ಎಂದಳು. ಆಗ ಮಮ್ಮಿ, ಉದಾಸೀನದ ಮುಖಭಾವದಲ್ಲಿಯೇ, 'ಎಂತ ಚಂದವೋ, ಉಪ್ಪೇ ಇರಲಿಲ್ಲ' ಎಂದದ್ದೇ ಇವನು ತಲೆ ಚಚ್ಚಿಕೊಂಡ. ಸುಮಿಯ ಜೊತೆಗೇ ಹೊರಟವನಿಗೆ, 'ಅವಳಿಗೆ ಹೋಗ್ಲಿಕ್ಕೆ ಗೊತ್ತಾಗ್ತದಲ್ಲಾ, ನೀ ಎಂತಕ್ಕೆ' ಎಂದು ಗದರಿದಳು. ದೊಡ್ಡ ದನಿಯಲ್ಲಿ ನಗುತ್ತ ಮಾತನಾಡುವ ಮಮ್ಮಿ ಹೀಗೆ ದಿಗಿಲಿಕ್ಕಿಸುವ ಹೆಂಗಸಾಗಿ ಬದಲಾಗಿದ್ದನ್ನು ನೋಡಿ ಭಯವಾಗಿ ಮನೆಯಲ್ಲೇ ಉಳಿದನು. ಆನಂತರ ಮನೆಯಲ್ಲಿ ಸುಮಿಯ ಬಗ್ಗೆ ಹೆಚ್ಚಿನ ಮಾತಾಗಲಿಲ್ಲ. ಆಗಾಗ ಇವನನ್ನು ನೋಡಿ ವ್ಯಂಗ್ಯವಾಗಿ ನಗುತ್ತಿದ್ದ ಎಡ್ವಿನಾ, ಸಂಜೆ ಅಪ್ಪ ಬಂದಾಗ 'ಫಿಲಿಯ ಲೌ ಕೇಸು ಬಂದಿತ್ತಲ್ಲಪ್ಪ ಇವತ್ತೂ' ಎಂದು ವರದಿಯೊಪ್ಪಿಸಿದ್ದಳು.

ಮಮ್ಮಿ ಅಪ್ಪ ಕೂಡ ಪ್ರೀತಿಸಿಯೇ ಮದುವೆಯಾದವರು ಎಂಬ ಉಮೇದಿನಲ್ಲಿ ಸುಮಿಯ ಬಗ್ಗೆ ಮನೆಯಲ್ಲಿ ತಿಳಿಸುವ ಹುರುಪಿನಲ್ಲಿದ್ದವ, ಹಿಂದಿನ ಸಂಜೆ, 'ಮಮ್ಮಿ, ನಿಮ್ಮದು ಆ ಕಾಲದಲ್ಲೇ ಲೌ ಮ್ಯಾರೇಜಲ್ಲಾ...' ಎಂದಾಗ ಇರುಸು ಮುರಿಸುಗೊಂಡ ಮಮ್ಮಿ 'ಎಂತ ಇಲ್ಲ, ಯಾರು ಹೇಳಿದ್ದು?' ಎಂದ ಬೆನ್ನಿಗೇ, 'ಆ ಕಾಲದಲ್ಲಿ ಪ್ರೀತಿಗೆಲ್ಲ ಬೆಲೆ ಇತ್ತು, ಈಗೆಂತ ಇಲ್ಲ' ಎಂದಿದ್ದಳು. ಅವಳು ಬಂದು ಹೋದ ರಾತ್ರಿ ಊಟದ ನಂತರ ಮಾತು ತೆಗೆದವನ ಕಡೆಗೆ ನೋಡದೇ, 'ನಿನಗೆಂತ ಅವಸರ. ನಾವು ಯೋಚಿಸುದು ಬೇಡ್ವಾ!' ಎಂದು ಎದ್ದು ಹೋದಳು. ಅಪ್ಪ ಎಂದಿನಂತೆ ಹೆಚ್ಚು ಮಾತಿಲ್ಲದೇ ಸುಮ್ಮನಿದ್ದರು. ಮೊದಲೆರೆಡು ದಿನ ಬಿಗುವಿನಲ್ಲಿದ್ದ ಮಮ್ಮಿ ಕ್ರಮೇಣ ಸರಿಹೋಗುವ ಲಕ್ಷಣ ತೋರಿತು. ಎಡ್ವಿನಾಳಿಗಾಗಿ ಮಟನ್ ಕೈಮಾ ಮಾಡುವ ತಯಾರಿಯಲ್ಲಿದ್ದವಳು, ಬಿಸಿಲಿನಲ್ಲಿ ಹರವಿದ್ದ ಹಾಸಿಗೆಗಳನ್ನು ಕೋಲಿನಿಂದ ಬಡಿಯುತ್ತಿದ್ದವನ ಬಳಿ ಬಂದು, 'ಅವಳ ಹೆಸರೇನೆಂದೆ? ಸುಚಿತ್ರವೋ, ಸುನೇತ್ರವೋ?' ಎಂದು ವಿಚಾರಿಸಿ, 'ಅವಸರ ಮಾಡ್ಲಿಕ್ಕಿಲ್ಲ, ನೋಡ್ವನ ಮುಂದೆ' ಎಂದು ಹೋದಳು.

ಎಲ್ಲವನ್ನೂ ಗಮನಿಸುತ್ತ, ಪೋಕರಿ ಮಕ್ಕಳಂತೆ ಇವನ ಕಾಲೆಳೆದುಕೊಂಡಿದ್ದ ಎಡ್ವಿನಾ, ಸುಮಿಯ ಕುರಿತು ಮಮ್ಮಿ ಮತ್ತು ಅಪ್ಪನ ನಿಲುವು ಮೆತ್ತಗಾಗಿದೆ ಎಂದು ತಿಳಿದದ್ದೇ, ಹೊಸತೇ ಕಿರಿಕಿರಿ ಶುರುಮಾಡಿದಳು. ಒಮ್ಮೆ ಥಟ್ಟನೇ, 'ನಿಮ್ಮಮ್ಮನ ಹೆಸರು ಗೊತ್ತೇನಾ ನಿಂಗೇ?' ಎಂದು ಕೇಳಿಬಿಟ್ಟಳು. ಮಮ್ಮಿ ಏನೂ ಕೇಳದವಳಂತೆ ನಟಿಸುತ್ತಾ, ದಿನಪತ್ರಿಕೆಯನ್ನು ಅತಿಯಾದ ಏಕಾಗ್ರತೆಯಲ್ಲಿ ಓದುತ್ತಿದ್ದಳು. 'ನಿಂಗೆ ನಿನ್ನ ಬಯಲಾಜಿಕಲ್ ಪೇರೆಂಟ್ಸಿನ ಮೇಲೆ ಪ್ರೀತಿ ಉಂಟಾ?', 'ಅಮ್ಮನ ಹೆಸರೂ ಗೊತ್ತಿಲ್ಲವಾ?, ಶೇ ಪಾಪ', 'ಸತ್ಯ ನೆನಪಿಲ್ವೇನಾ, ಎಂತಾರ ನೆನಪಿದ್ದೇ ಇರ್ತದೆ, ಹೆತ್ತ ಅಮ್ಮ' ಎಂದೆಲ್ಲ ಕಾಡುತ್ತಿದ್ದವಳನ್ನು ಮಮ್ಮಿ 'ಏ ಹುಡುಗಿ, ಎಂತದೇ ಅದು ನಿನ್ನ ಕರ್ಮ' ಎಂದು ಗಂಟಲು ಮಾಡಿ ಸುಮ್ಮನಾಗಿಸಿದ್ದಳು. ಆದರೂ ಆ ರಾತ್ರಿ ಊಟ ಮುಗಿಸಿ ಕುಳಿತಿದ್ದವನ ಹತ್ತಿರ ಬಂದ ಎಡ್ವಿನಾ, 'ಎಂತದಾ, ನಿನ್ನಮ್ಮನ ಹೆಸರು ಬೇಡ್ವೇನಾ ನಿಂಗೇ?' ಎಂದು ಗದರಿಸುವಂತೆ ಕೇಳಿದಳು. ಇವನಿಗೆ ರೇಗಿತು 'ಏಯ್! ಎಂತದೇ! ಯಾವ ಅಮ್ಮನ ಹೆಸರು? ಬೇಡ ನನಗೆ, ಹೋಗೆ ಆಚೆ' ಎಂದು ಕೂಗಿಬಿಟ್ಟ. ಒಂದು ಕ್ಷಣ ಅಪ್ರತಿಭಳಾದಂತೆ ಕಂಡವಳು, 'ಯಾರಿಗಾ ಹೋಗು ಅನ್ನದು ನೀನೂ? ಎಂತದಾ? ನನ್ನ ಅಮ್ಮನ ಮನೆಯಿಂದ ನಾನು ಹೋಗಬೇಕನಾ? ನನ್ನ ಸ್ವಂತ ಅಪ್ಪನ ಮನೆಯಿಂದ ಹೋಗಬೇಕನಾ? ಇದು ನನ್ನ ಮನೆ! ಬೇಕಾದ್ರೆ ನೀ ಹೋಗು' ಎಂದು ಕಿರುಚಿ ಸೋಫಾದ ಮೇಲೆ ಧೊಪ್ಪೆಂದು ಕುಳಿತಳು.

ತಾನು ಮಮ್ಮಿ ಡ್ಯಾಡಿಯ ಸ್ವಂತ ಮಗನಲ್ಲ ಎಂಬ ವಿಚಾರ ಅವನಿಗಾಗಲೀ, ಎಡ್ವಿನಾಗಾಗಲೀ ಹೊಸತೇನಲ್ಲ. ಚಿಕ್ಕವರಿದ್ದಾಗ ಜಗಳವಾದಾಗಲೆಲ್ಲ, 'ನಿನ್ನನ್ನು ಕೆಂಗೇರಿ ಮೋರಿಯಿಂದಲ್ಲವಾ ತಂದದ್ದು' ಎಂದೆಲ್ಲ ಎಡ್ವಿನಾ ಮೂದಲಿಸುತ್ತಿದ್ದಳಾದರೂ, ಅದನ್ನೆಲ್ಲ ಇವನು ತಲೆಗೇ ಹಚ್ಚಿಕೊಂಡಿರಲಿಲ್ಲ. ಎಳವೆಯಿಂದಲೂ ತಾಯಿ ತಂದೆ ಎಂದಾಗ ಮಮ್ಮಿ ಮತ್ತು ಅಪ್ಪನ ಚಿತ್ರಗಳೇ ಮೂಡುತ್ತಿದ್ದುವು. ದೊಡ್ಡವರಾದಂತೆ ಅವರಿಬ್ಬರ ನಡುವಿನ ಜಗಳಗಳು ವಿವಿಧ ನಿರುಪದ್ರವೀ ರೂಪಗಳನ್ನು ತಾಳಿದ್ದವಾದರೂ,